ಕರ್ನಾಟಕ ಸರ್ಕಾರ

# ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
## ಮಡಿಕೇರಿ, ಕೊಡಗು ಜಿಲ್ಲೆ.

Phone: 08272 298220 Website: www.kimskodagu.kar.nic.in E-mail: directormckodagu@gmail.com

ಸಂಖ್ಯೆ: ಕೊ.ವೈ.ವಿ.ಸಂ.ಮ/ಸರಬರಾಜು/2017-18/1473 ದಿನಾಂಕ:- 05.03.2018

**ದರಪಟ್ಟಿ ಸಲ್ಲಿಸಲು ಪ್ರಕಟಣೆ**

ವಿಷಯ:- ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ ಇಲ್ಲಿನ ಭೋದಕ ಆಸ್ಪತ್ರೆಯ ರೋಗಿಗಳ ಉಪಯೋಗಕ್ಕಾಗಿ ಅವಶ್ಯವಿರುವ ತುರ್ತು ಔಷಧಿಗಳನ್ನು ಖರೀದಿಸಿ ಸರಬರಾಜು ಮಾಡುವ ಬಗ್ಗೆ.

------

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ ಇಲ್ಲಿನ ಭೋದಕ ಆಸ್ಪತ್ರೆಯ, ರೋಗಿಗಳ ಉಪಯೋಗಕ್ಕಾಗಿ ಅವಶ್ಯವಿರುವ ಈ ಕೆಳಕಂಡ ಪ್ರಮಾಣದ ತುರ್ತು ಔಷಧಿಗಳನ್ನು ಸರಬರಾಜು ಮಾಡಲು ಸ್ಥಳೀಯ ಸರಬರಾಜು ಸಂಸ್ಥೆ/ಅಧಿಕೃತ ವಿತರಕರಿಂದ ದರಪಟ್ಟಿಯನ್ನು ಕರೆಯಲಾಗಿದೆ. ಮೊಹರಾದ ದರಪಟ್ಟಿಯನ್ನು ನಿರ್ದೇಶಕರು, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ ಇವರಿಗೆ ಸಲ್ಲಿಸುವುದು.

| Sl. No. | Name of the Item | Quantity Required |
|---|---|---|
| 1. | Syringe – 1ml | 2000 Nos |
| 2. | Needle – 26 G- 1½ " | 100 Nos |
| 3. | Folly's Catheter – No. 16 | 1000 Nos |
| 4. | I.V. Canula No. 18 | 2000 Nos |
| 5. | Endotrachal Tube No. 6.5 | 100 Nos |
| 6. | Syringe – 50 ml | 500 Nos |

**ನಿಬಂಧನಗಳು:**

1. ಸರಬರಾಜುದಾರರು ಅಧಿಕೃತ ಸಂಸ್ಥೆಯವರಾಗಿರಬೇಕು. ಚಾಲ್ತಿಯಲ್ಲಿರುವ ಪರವಾನಗಿಯನ್ನು ಹೊಂದಿರಬೇಕು.
2. ಲಕೋಟೆಯ ಮೇಲೆ **ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ ಇಲ್ಲಿನ ಭೋದಕ ಆಸ್ಪತ್ರೆಗೆ ಅವಶ್ಯವಿರುವ ಔಷಧಿ ಪೂರೈಕೆಗೆ ದರಪಟ್ಟಿಗಳ ಆಹ್ವಾನ** ಎಂದು ಬರೆದ ಮೊಹರು ಮಾಡಿದ ದರಪಟ್ಟಿಗಳನ್ನು ದಿನಾಂಕ: 15.03.2018 ರ ಸಂಜೆ 4.00 ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸುವುದು, ನಂತರ ಬರುವ ದರಪಟ್ಟಿಗಳನ್ನು ಅಂಗೀಕರಿಸುವುದಿಲ್ಲ.
3. ಸೂಚಿಸಿರುವ ದರಗಳು ಒಪ್ಪಿಗೆಯಾದಲ್ಲಿ ನಿಗದಿಪಡಿಸಿರುವ ಅವಧಿಯಲ್ಲಿ ಯಾವುದೇ ದರ ಬದಲಾವಣೆ ಮಾಡುವಂತಿಲ್ಲ ಮತ್ತು ಸೂಚಿತ ದರಗಳು ಎಷ್ಟು ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ ಎಂಬುದನ್ನು ತಪ್ಪದೇ ನಮೂದಿಸುವುದು ಮತ್ತು ಸೂಚಿತ ದರಗಳು ಸರ್ಕಾರಿ ನಿಬಂಧನೆಯಂತೆ ಲಭ್ಯವಿರುವ ತೆರಿಗೆ, ಇತ್ಯಾದಿಗಳನ್ನು ಸಹ ತಪ್ಪದೇ ನಮೂದಿಸುವುದು.
4. ದರ ಪಟ್ಟಿಯನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರ ಈ ಕೆಳ ಸಹಿದಾರರು ಹೊಂದಿರುತ್ತಾರೆ.
5. ಬೇಡಿಕೆಯ ಅಂದಾಜು ಪ್ರಮಾಣವು ಆಸ್ಪತ್ರೆಯ ಅಗತ್ಯತೆಗೆ ತಕ್ಕಂತೆ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ಖರೀದಿಸುವ ನಿಬಂಧನೆಗೊಳಪಟ್ಟಿರುತ್ತದೆ.

ನಿರ್ದೇಶಕರು ಹಾಗೂ ಡೀನ್
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಡಿಕೇರಿ

ಪ್ರತಿಯನ್ನು, ಈ ಕೆಳಕಂಡ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ವ್ಯಾಪಕ ಪ್ರಚಾರಕ್ಕಾಗಿ ವಂದನೆಗಳೊಂದಿಗೆ ಸಲ್ಲಿಸಲಾಗಿದೆ.

1. ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ, ಇವರಿಗೆ ಸಲ್ಲಿಸುತ್ತಾ, ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಣೆಯ ಕೃಪೆಗಾಗಿ ಸಲ್ಲಿಸಲಾಗಿದೆ.
2. ನಿರ್ದೇಶಕರು ಮತ್ತು ಡೀನ್, ವೈದ್ಯಕೀಯ ಕಾಲೇಜು, /ಗುಲ್ಬರ್ಗ/ಗದಗ/ಕೊಪ್ಪಳ/ಮೈಸೂರು/ಚಾಮಾರಾಜನಗರ/ಕಾರವಾರ, ಇವರಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.

ಕರ್ನಾಟಕ ಸರ್ಕಾರ
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಡಿಕೇರಿ, ಕೊಡಗು ಜಿಲ್ಲೆ.

Phone: 08272 298220 Website: www.kimskodagu.kar.nic.in E-mail: directormckodagu@gmail.com

3. ಉಪ ನಿರ್ದೇಶಕರು, ವಾರ್ತಾ ಇಲಾಖೆ, ವಾರ್ತಾಭವನ, ಮಡಿಕೇರಿ ಇವರಿಗೆ ಕಳುಹಿಸುತ್ತಾ, ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
4. ವೈದ್ಯಕೀಯ ಅಧೀಕ್ಷಕರು, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ, ಮಡಿಕೇರಿ ಇವರಿಗೆ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
5. ಜಿಲ್ಲಾ ಆರೋಗ್ಯ ಮತ್ತು ಕುಕ ಅಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
6. ಕಛೇರಿ ಸೂಚನಾ ಫಲಕಕ್ಕೆ/ವೆಬ್ ಸೈಟ್ ಪ್ರತಿ
7. ಕಛೇರಿ ಪ್ರತಿ.